ಮೂರು ದಿನ ಕಳೆದ ಮೇಲೆ ಬಂದರು. ಆವತ್ತು ಮನೆಯಲ್ಲೇ ಇದ್ದರು. ಮುಂದೇನು ಮಾಡ್ತೀಯ ಅಂತ ನನ್ನ ಕೇಳಿದರು. ನಾನು ಏನೂ ಹೇಳಲಿಲ್ಲ. ಅವರ ಜತೆ ಮಾತಾಡಬೇಕು ಅಂತಲೂ ಅನ್ನಿಸ್ಲಿಲ್ಲ. ವೈಕುಂಠ ಸಮಾರಾಧನೆ ದಿನ ಬಂದು ಸ್ವಲ್ಪ ಹೊತ್ತು ಇದ್ದು ಹೋದರು. ಊಟವನ್ನೂ ಮಾಡಲಿಲ್ಲ. ಅಪ್ಪನ ಮೇಲೆ ತುಂಬಾ ಸಿಟ್ಟು ಬಂದಿತ್ತು. ಮೂರು ತಿಂಗಳು ಕಳೆಯೋದರಲ್ಲಿ ನನಗೆ ಕೆಲ್ಸ ಸಿಕ್ತು. ಕ್ರಮೇಣ ಎಲ್ಲವನ್ನೂ ಮರೀತಾ ಬಂದೆ. ಅಮ್ಮನ ನೆನಪಾದಾಗ ಈಗಲೂ ತುಂಬಾನೇ ನೋವಾಗುತ್ತೆ. ಅವರ ತಾಳ್ಮೆ, ಅಪ್ಪನ ದುಷ್ಟತನ ಎರಡೂ ನನ್ನನ್ನು ತುಂಬಾ ಕಾಡಿದವು. ಬಂದದ್ದನ್ನು ಬಂದ ಹಾಗೆ ಸ್ವೀಕರಿಸಬೇಕು ಅನ್ನೋದನ್ನು ಅಮ್ಮನಿಂದ ಕಲಿತೆ. ಅದೇ ಮನಃಸ್ಥಿತಿ ಬೆಳೆಸಿಕೊಂಡೆ. ನಾನು ಮದುವೆ ಆಗೋ ವಿಷಯವನ್ನೂ ಅಪ್ಪನಿಗೆ ಹೇಳಲಿಲ್ಲ.

ಅಪ್ಪನ ಜತೆ ಲಿವಿಂಗ್ ರಿಲೇಷನ್‌ನಲ್ಲಿದ್ದ ಹೆಂಗಸಿನ ಹೆಸರು ಸಹ ನನಗೆ ಗೊತ್ತಿಲ್ಲ! ಅಮ್ಮನ ಹನ್ನೊಂದನೆ ದಿನದ ಕಾರ್ಯಗಳು ನಡೆಯುವಾಗ ಆಕೆ ಅಪ್ಪನ ಜತೆ ಬಂದಿದ್ದರು. ದಾನ ಕೊಡೋ ಸಮಯದಲ್ಲಿ ಹತ್ತಿರ ಬಂದು ಸಾರಿ ಅಂದಿದ್ದರು. ನಾನು ತಲೆ ಎತ್ತಿ ಅವರನ್ನು ನೋಡಲೂ ಇಲ್ಲ. ಅದಾದ ಆರೇ ತಿಂಗಳಲ್ಲಿ ಆಕೆ ಸತ್ತುಹೋದರು ಅಂತ ಗೊತ್ತಾಯ್ತು. ಆಕೆಯ ಗಂಡ, ಮಗ ಮನೆಗೆ ಬಂದು ಅಪ್ಪನ ಜತೆ ಜಗಳ ತೆಗೆದು ಹೆಣದ ಎದುರೇ ಅವರನ್ನು ಮನೆಯಿಂದ ಹೊರಕ್ಕೆ ದಬ್ಬಿದರಂತೆ!

ಆಮೇಲೆ ಅಪ್ಪ ಇದೇ ಊರಲ್ಲಿ ಯಾವುದೋ ಲಾಡ್ಜಿನಲ್ಲಿದ್ದರು. ಮನೆಗೆ ಬರೋಕೆ ಮುಖ ಇರಲಿಲ್ಲ. ಎರಡು ತಿಂಗಳು ಕಳೆದ ಮೇಲೆ ಅಪ್ಪನ ಸ್ನೇಹಿತರೊಬ್ಬರು ಬಂದು ಎಷ್ಟಾದರೂ ನಿನ್ನ ತಂದೆ, ನೀನೇ ಹೋಗಿ ಮನೆಗೆ ಬನ್ನಿ ಅಂತ ಕರಿ ಅಂದರು. ನಾನು ಹೋಗಲಿಲ್ಲ, ಅವರ ಇನ್ನೊಬ್ಬ ಫ್ರೆಂಡ್ ಮೂಲಕ ಹೇಳಿಕಳಿಸಿದೆ. ಅವರು ನನ್ನ ಮನೆಯಲ್ಲಿ ಇರೋದು ಇಷ್ಟವಿಲ್ಲ ಅಂತ ಸ್ಪಷ್ಟವಾಗಿ ಹೇಳಿದ್ದೆ. ಈ ಮನೆಯನ್ನು ಅವರಿಗೆ ಬಿಟ್ಟುಕೊಟ್ಟು, ನಾನು ಮೇಲಿನ ಮಹಡಿಗೆ ಹೋದೆ. ಅಪ್ಪನ ನೆರಳು ನಮ್ಮ ಮೇಲೆ ಬೀಳದಂತೆ ನೋಡಿಕೊಂಡೆ. ನಾನು ಆರ್.ಕೆ. ಪುರಂನಲ್ಲಿ ಹೊಸ ಮನೆ ಕಟ್ಟಿಸಿಕೊಂಡು ಶಿಫ್ಟ್ ಆದೆ. ಹೋಗೋ ಮೊದಲು ಗಣಪನಿಗೆ ನಾನಿದ್ದ ಮನೆಯಲ್ಲಿ ಬಂದಿರು ಅಂದೆ. ಅಪ್ಪನ ವಿದ್ವತ್ತಿನ ಬಗ್ಗೆ ಅವನಿಗೆ ಗೌರವ ಇತ್ತು. ಅವರ ವೈಯಕ್ತಿಕ ಜೀವನದ ಬಗ್ಗೆ ಅವನಿಗೆ ಹೆಚ್ಚು ಗೊತ್ತಿಲ್ಲ. ಅಲ್ಪಸ್ವಲ್ಪ ಗೊತ್ತಿರಬಹುದು. ಅವನು ಅವರ ಕೇರ್‌ಟೇಕರ್ ಥರಾನೇ ಇದ್ದ. ಅವರ ಬ್ಯಾಂಕು, ಇನ್‌ಕಂಟ್ಯಾಕ್ಸು, ಸೇವಿಂಗ್ಸ್, ಪೆನ್ಷನ್ ಇತ್ಯಾದಿ ವ್ಯವಹಾರಗಳನ್ನು ನೋಡಿಕೊಳ್ತಿದ್ದ. ಒಂದ್ ಸಲ ಅದರ ಬಗ್ಗೆ ನನಗೆ ಹೇಳೋಕೆ ಬಂದ. ನನಗೆ ಹೇಳಬೇಡ ಅಂದಿದ್ದೆ. ಒಂದು ಸಲವೂ ನಾನು ಅವರನ್ನು ಈ ಮನೆಗೆ ಬಂದು ನೋಡಲಿಲ್ಲ. ನನ್ನ ಹೆಂಡತಿಗೆ ಅವರ ಪರಿಚಯವೇ ಇಲ್ಲ' ಅಂತ ಹೇಳಿ ನಿಟ್ಟುಸಿರು ಬಿಟ್ಟ.

'ಇಷ್ಟನ್ನು ಹೇಳಬೇಕಾಗಿತ್ತು ಹೇಳಿದ್ದೀನಿ. ಏನಾದರೂ ಪ್ರಶ್ನೆ ಕೇಳೋದಿದ್ದರೆ ಕೇಳಿ' ಅನ್ನುತ್ತ ಇನ್‌ಸ್ಪೆಕ್ಟರ್ ಮುಖ ನೋಡಿದ. ಮತ್ತೆ ಅವನೇ ಹ್ಞಾ, 'ಇನ್ನೊಂದು ವಿಷ್ಯ...' ಅನ್ನುತ್ತ, 'ಬಲರಾಮ್ ಅವರಿಗೆ ಜಾತಿ ವ್ಯವಸ್ಥೆ ಬಗ್ಗೆ ಸಿಟ್ಟಿತ್ತು. ಜಾತಿ ಅನ್ನೋದು ವಾಸಿ ಆಗದ ರೋಗ. ಈಗ ಅನೇಕರು ತಮಗಿರುವ ರೋಗವನ್ನು ಹೆಮ್ಮೆಯಿಂದ ಹೇಳಿಕೊಳ್ತಾರೆ. ನಾನೆಂದೂ ನನ್ನ ಜಾತಿ ಯಾವುದೆಂದು ಅಂತ ಯಾರಿಗೂ ಹೇಳಲಿಲ್ಲ. ಸ್ಕೂಲಿನ ದಾಖಲೆಗಳಲ್ಲಿದ್ದ ಜಾತಿಯ ಹೆಸರನ್ನು ಲಂಚಕೊಟ್ಟು ತೆಗೆಸಿದ್ದೆ. ಅಪ್ಪ ಅಮ್ಮ ಇಟ್ಟ ಹೆಸರನ್ನೂ ನಾನು ಅಫಿಡವಿಟ್ ಹಾಕಿ ಬದಲಾಯಿಸಿಕೊಂಡೆ ಅಂತ ಅವರು ನನಗೆ ಹೇಳಿದ್ದರು. ಅವರಿಗೆ ದೇವರು, ಪೂಜೆ ಇತ್ಯಾದಿಗಳ ಬಗ್ಗೆಯೂ ನಂಬಿಕೆ ಇರಲಿಲ್ಲ. ಅವರು ದೇವಸ್ಥಾನಕ್ಕೆ ಹೋಗಿದ್ದನ್ನು ನಾನೆಂದೂ ನೋಡಿಲ್ಲ. ಈ ಕಾರಣಕ್ಕೆ ಅನೇಕ ಪ್ರಗತಿಪರರಿಗೆ, ಗ್ರಾಮೀಣ ಪ್ರದೇಶಗಳಿಂದ ಓದೋಕೆ ಬಂದ ಹುಡುಗರಿಗೆ ಅಪ್ಪ ರೋಲ್ ಮಾಡೆಲ್ ಆಗಿದ್ದರು. ಅವರು ತಮ್ಮನ್ನು ಅಸ್ತಿತ್ವವಾದಿ ಅಂತ ಹೇಳಿಕೊಳ್ತಿದ್ದರು. ಅವರು ಮಜಾವಾದಿ. ಈ ಕ್ಷಣದ ಸುಖ ಮುಖ್ಯ ಅನ್ನೋ ಮನಃಸ್ಥಿತಿಯವರು. ಈಗ ಅನೇಕರು ಇಂಥ ಮನಃಸ್ಥಿತಿ ಬೆಳೆಸಿಕೊಂಡಿದ್ದಾರೆ. ಎಲ್ಲಾ